# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

## KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 9** | **ವಿಷಯ : ಸಮಾಜ ವಿಜ್ಞಾನ** | **ಅಂಕಗಳು : 80** | **ಸಮಯ : 3 ಗಂಟೆ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 14 | | 27 | |
| 2 | | 15 | | 28 | |
| 3 | | 16 | | 29 | |
| 4 | | 17 | | 30 | |
| 5 | | 18 | | 31 | |
| 6 | | 19 | | 32 | |
| 7 | | 20 | | 33 | |
| 8 | | 21 | | 34 | |
| 9 | | 22 | | 35 | |
| 10 | | 23 | | 36 | |
| 11 | | 24 | | 37 | |
| 12 | | 25 | | 38 | |
| 13 | | 26 | | | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I. ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **[8 x 1 = 8]**

1. ಕಾರ್ಕೋಟ ಮನೆತನದ ಸ್ಥಾಪಕ

A. ಲಲಿತಾದಿತ್ಯ B. ರಾಜಾ ದುರ್ಲಭವರ್ಧನ

C. ಉದಯಾದಿತ್ಯ D. ವಜ್ರಾದಿತ್ಯ

ಉತ್ತರ: ☐ ____________________

2. ಶಿವಾಜಿಯ ಸೈನಿಕರು ಈ ಯುದ್ಧ ತಂತ್ರಗಾರಿಕೆಯಲ್ಲಿ ವಿಶೇಷ ತರಬೇತಿ ಪಡೆದಿದ್ದರು

A. ಗೆರಿಲ್ಲಾ B. ಚಕ್ರವ್ಯೂಹ

C. ಮಲ್ಲಯುದ್ಧ D. ಫಿರಂಗಿಯುದ್ಧ

ಉತ್ತರ: ☐ ____________________

3. ರಾಜ್ಯ ಶಾಸಕಾಂಗದ ಮೇಲ್ಮನೆ

A. ವಿಧಾನಸಭೆ B. ಲೋಕಸಭೆ

C. ರಾಜ್ಯಸಭೆ D. ವಿಧಾನಪರಿಷತ್

ಉತ್ತರ: ☐ ____________________

4. ಭಾರತೀಯ ಸಮಾಜದ ಆಧಾರಸ್ತಂಭ

A. ನಗರ ಸಮುದಾಯ B. ಬುಡಕಟ್ಟು ಸಮುದಾಯ

C. ಗ್ರಾಮೀಣ ಸಮುದಾಯ D. ಪಟ್ಟಣ ಸಮುದಾಯ

ಉತ್ತರ: ☐ ____________________

5. ಕರ್ನಾಟಕದ ಜೀವಿ ವೈವಿಧ್ಯತಾ ವಲಯ

A. ಮಲೆನಾಡು B. ಕರಾವಳಿ

C. ಉತ್ತರ ಮೈದಾನ D. ದಕ್ಷಿಣ ಮೈದಾನ

ಉತ್ತರ: ☐ ____________________

6. ಅತಿಹೆಚ್ಚು ಜಲಪಾತಗಳನ್ನು ಹೊಂದಿರುವ ಕರ್ನಾಟಕದ ಜಿಲ್ಲೆ

A. ಉತ್ತರ ಕನ್ನಡ B. ಮಂಗಳೂರು

C. ಉಡುಪಿ D. ಬೆಳಗಾವಿ

ಉತ್ತರ: ☐ ____________________

7. ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಯಾದ ವರ್ಷ

A. 1947 B. 1935

C. 1962 D. 1986

ಉತ್ತರ: ☐ ____________________

8. 20 ಲಕ್ಷ ರೂ.ಗಳಿಗಿಂತ ಕಡಿಮೆ ಮೌಲ್ಯದ ಸರಕು ಅಥವಾ ಸೇವೆಗಳ ಕುರಿತಾದ ಇರುವ ದೂರುಗಳನ್ನು ಸಲ್ಲಿಸಬೇಕಾದ ಗ್ರಾಹಕ ವೇದಿಕೆ

A. ರಾಷ್ಟ್ರೀಯ ಆಯೋಗ B. ತಾಲ್ಲೂಕು ವೇದಿಕೆ

C. ರಾಜ್ಯ ಆಯೋಗ D. ಜಿಲ್ಲಾ ವೇದಿಕೆ

ಉತ್ತರ: ☐ ____________________

[ Turn over

**II. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **[8 x 1 = 8]**

9. ಗುರುನಾನಕರ ಬೋಧನೆಗಳ ಸಂಗ್ರಹ ಯಾವುದು?

10. 'ಅಹಂ ಬ್ರಹ್ಮಾಸ್ಮಿ' ಎಂದು ಪ್ರತಿಪಾದಿಸಿದವರು ಯಾರು?

11. ಸಾಮಾಜೀಕರಣ ಎಂದರೇನು?

12. ಕುಟುಂಬ ಪರಿಸರದಲ್ಲಿ ಮಗು ಕಲಿಯುವ ಮೌಲ್ಯಗಳಾವುವು?

13. ನೀರಾವರಿ ಬೇಸಾಯವನ್ನು ವ್ಯಾಖ್ಯಾನಿಸಿ.

14. ಉತ್ಪಾದನಾಂಗಗಳು ಯಾವುವು?

15. ಕಾರವಾರದ ಬಳಿ ಇರುವ ನೌಕಾನೆಲೆಯನ್ನು ಏನೆಂದು ಕರೆಯಲಾಗಿದೆ?

16. ಮಾರುಕಟ್ಟೆ ವ್ಯವಸ್ಥೆ ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **[8 x 2 = 16]**

17. ಫ್ರಾನ್ಸಿನ ಕ್ರಾಂತಿಗೆ ಆರ್ಥಿಕ ಅಂಶಗಳು ಹೇಗೆ ಕಾರಣವಾದವು?

18. ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಿರುವ ಉದ್ದೇಶವೇನು?

19. ಭಾರತೀಯ ಬುಡಕಟ್ಟು ಜನಾಂಗಗಳನ್ನು ಭೌಗೋಳಿಕವಾಗಿ ಹೇಗೆ ವರ್ಗೀಕರಿಸಲಾಗಿದೆ?

20. ಭಾರತದಲ್ಲಿ ಕರ್ನಾಟಕದ ಭೌಗೋಳಿಕ ಸ್ಥಾನವನ್ನು ವಿವರಿಸಿ.

21. ಮ್ಯಾಂಗನೀಸ್‌ನ ಪ್ರಯೋಜನಗಳನ್ನು ತಿಳಿಸಿ

22. ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಕಾವೇರಿ, ಕೃಷ್ಣಾ, ತುಂಗಭದ್ರಾ ಜಲಾನಯನ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ ಏಕೆ?

23. ಶ್ರಮವಿಭಜನೆಯು ಉತ್ಪಾದನೆ ಹೆಚ್ಚಳಕ್ಕೆ ಹೇಗೆ ಕಾರಣವಾಗಿದೆ?

24. ವ್ಯವಹಾರದ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳಾವುವು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.** **[9 x 3 = 27]**

25. ಕ್ರೈಸ್ತ ಧರ್ಮ ಹೆಚ್ಚು ಜನಪ್ರಿಯವಾಗಲು ಕಾರಣಗಳೇನು?

26. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ತ್ವಗಳಾವುವು?

27. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳು ಯಾವುವು?

28. ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯ ನಿರ್ದೇಶಕ ತತ್ತ್ವಗಳು ದಿಕ್ಸೂಚಿಯಾಗಿವೆ ಹೇಗೆ?

29. ಅವಿಭಕ್ತ ಕುಟುಂಬದ ಲಕ್ಷಣಗಳನ್ನು ವಿವರಿಸಿ.

30. ಕರ್ನಾಟಕದಲ್ಲಿ ನಿತ್ಯಹರಿದ್ವರ್ಣದ ಕಾಡುಗಳು, ಎಲೆ ಉದುರಿಸುವ (ಸಸ್ಯವರ್ಗ) ಕಾಡುಗಳಿಗಿಂತ ಹೇಗೆ ಭಿನ್ನವಾಗಿವೆ?

31. ಜಲವಿದ್ಯುತ್ ಉತ್ಪಾದನೆಯಲ್ಲಿ ಕರ್ನಾಟಕವು ಭಾರತದಲ್ಲಿಯೇ ಪ್ರಥಮವಾಗಿದೆ. ಹೇಗೆ ವಿವರಿಸಿ.

32. ಕರ್ನಾಟಕದಲ್ಲಿ ಪುಷ್ಪಕೃಷಿಯು ಒಂದು ಪ್ರಮುಖ ಉದ್ಯಮವಾಗಿ ಬೆಳೆಯುತ್ತಿದೆ ಏಕೆ?

33. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಾರುಕಟ್ಟೆಯು ಪ್ರಾಮುಖ್ಯತೆಯನ್ನು ಹೊಂದಿದೆ ಹೇಗೆ?

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **[4 x 4 = 16]**

34. ರಾಬರ್ಟ್ ಸ್ಯುಯೆಲ್‌ರ ಪ್ರಕಾರ, "ಕೃಷ್ಣದೇವರಾಯನು ಅಸಾಮಾನ್ಯ ಪರಾಕ್ರಮಿ". ಈ ಹೇಳಿಕೆಯನ್ನು ಸಮರ್ಥಿಸಿ.

35. ಮೊಘಲರ ಕಾಲದ ಅರ್ಥವ್ಯವಸ್ಥೆಯಲ್ಲಿ ಕೈಗಾರಿಕೆಗಳ ಪಾತ್ರ ಮಹತ್ವದ್ದಾಗಿತ್ತು. ವಿವರಿಸಿ.

[ Turn over

36. ಭಾರತದ ರಾಷ್ಟ್ರಪತಿಗಳ ಚುನಾವಣಾ ಪದ್ಧತಿಯನ್ನು ವಿವರಿಸಿ:

37. ಕರ್ನಾಟಕದಲ್ಲಿ ರೈಲು ಸಾರಿಗೆಗಿಂತ ರಸ್ತೆ ಸಾರಿಗೆ ಉತ್ತಮವಾದದ್ದು ಸ್ಪಷ್ಟೀಕರಿಸಿ.

**VI. 38**. **ಕರ್ನಾಟಕದ ನಕ್ಷೆಯನ್ನು ಬರೆದು, ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.** **[1 + 4 = 5]**

A) ಬಂಡೀಪುರ

B) ದಾಂಡೇಲಿ

C) ಮಂಗಳೂರು

D) ಬೀದರ್